ನಿಲುವು ಇರುವುದು ಬೇರೆಯದೇ ಸಂಗತಿ. ಯಾಕೆಂದರೆ, ಭಾರತದ ಎಲ್ಲ ಭಾಷೆಗಳಿಗೂ ಸಮಾನ ಅವಕಾಶ, ಸ್ಥಾನಮಾನ ಇರಬೇಕಾದುದೇ ನ್ಯಾಯವಾದ ನಿಲುವು.

**◆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಾದೇಶಿಕ ಕಚೇರಿ ಮದರಾಸಿನಲ್ಲಿತ್ತು. ಅದನ್ನು ಬೆಂಗಳೂರಿಗೆ ತರಲು ನೀವು ನಡೆಸಿದ ಹೋರಾಟದ ಬಗ್ಗೆ ಹೇಳಿ.**

ಅಕಾಡೆಮಿಯ ದಕ್ಷಿಣ ಭಾರತದ ಕಚೇರಿ ಪ್ರಾರಂಭದಿಂದಲೂ ಮದ್ರಾಸಿನಲ್ಲಿ ಇತ್ತು. ನಾನು ಮುಖ್ಯಸ್ಥನಾಗಿ ಅಲ್ಲಿಗೆ 1986ರಲ್ಲಿ ಹೋದೆ. ಅಷ್ಟೂ ವರ್ಷಗಳ ಕಾಲ ಅಕಾಡೆಮಿ ಅಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಕೆಲಸ ಮಾಡುತ್ತಿತ್ತು. ಅಲ್ಲದೆ ತಮಿಳಿನ ಕೆಲವರು ಕನ್ನಡಿಗನೊಬ್ಬನನ್ನು ಒಪ್ಪಿಕೊಳ್ಳುವ ಔದಾರ್ಯ ತೋರದೆ ಕಿರಿಕಿರಿ ಮಾಡುತ್ತಿದ್ದರು. ಬೆಂಗಳೂರಿನ ನನ್ನ ಹಿರಿಯ ಗೆಳೆಯರೊಬ್ಬರು ಕರ್ನಾಟಕ ಸರ್ಕಾರದಿಂದ ಒಂದು ಬಾಡಿಗೆ ರಹಿತ ಕಚೇರಿಗೆ ಪ್ರಯತ್ನಿಸಿ, ಆ ಕಚೇರಿಯನ್ನು ಬೆಂಗಳೂರಿಗೆ ತರಲು ಸಲಹೆ ಕೊಟ್ಟರು. ಆ ಪ್ರಯತ್ನಕ್ಕೆ ನನಗೆ ಸಹಕಾರ ನೀಡಿದವರು ಮುಖ್ಯವಾಗಿ ನನ್ನ ಜೊತೆ ಕಾಲೇಜಿನಲ್ಲಿ ಮತ್ತು ಹಾಸ್ಟೆಲ್‌ನಲ್ಲಿದ್ದ, ಮತ್ತು ಆಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದ ಐ.ಎಂ. ವಿಠ್ಠಲಮೂರ್ತಿ. ಅವರು ಎಡಿಎ ರಂಗಮಂದಿರದಲ್ಲಿ ಉಚಿತ ಕಚೇರಿ ಸ್ಥಳ ಕೊಡಮಾಡಿದರು. ಮುಂದೆ ಅವರೇ ಮುತುವರ್ಜಿ ವಹಿಸಿದ್ದರಿಂದಾಗಿ, ಕುಲಪತಿ ಎನ್.ಆರ್. ಶೆಟ್ಟಿ ಅವರ ಮೂಲಕ ಸೆಂಟ್ರಲ್ ಕಾಲೇಜು ಆವರಣದಲ್ಲಿ ಅಕಾಡೆಮಿ ನೆಲೆಯೂರಿತು. ಆ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಲ್ಲಿ ನನ್ನ ಗೆಳೆಯರಾದ ಪ್ರೊ. ಎಸ್. ಚಂದ್ರಶೇಖರ್, ರುದ್ರಮುನಿ, ಟಿ. ವೆಂಕಟೇಶ್ ಮೂರ್ತಿ ಅವರೆಲ್ಲರ ಪ್ರಯತ್ನದಿಂದ ಇದು ಸಾಧ್ಯವಾಯಿತು. ಅಕಾಡೆಮಿಯ ಅಧ್ಯಕ್ಷರಾಗಿದ್ದ ಬೀರೇಂದ್ರ ಕುಮಾರ್ ಭಟ್ಟಾಚಾರ್ಯ, ಕಾರ್ಯದರ್ಶಿ ಇಂದ್ರನಾಥ ಚೌಧುರಿ ನನ್ನ ಪ್ರಯತ್ನಕ್ಕೆ ಅಕಾಡೆಮಿಯ ಒಪ್ಪಿಗೆಯನ್ನು ಒದಗಿಸಿಕೊಟ್ಟರು. ಇದಕ್ಕೆ ಬೇರೆಬೇರೆ ರೀತಿಯ ವಿರೋಧವನ್ನೂ ಎದುರಿಸಬೇಕಾಯಿತು. ಕೆಲವು ಲೇಖಕರು ನನ್ನ ವೃತ್ತಿ ಜೀವನದ ಕೊನೆ ಗಳಿಗೆಯವರೆಗೂ ಇನ್ನಿಲ್ಲದ ಕಾಟ ಕೊಟ್ಟರು.



ಸಂಕ್ಷಿಪ್ತದಲ್ಲಿ ಇಷ್ಟು ಕಥೆ. ಈಗ ದಕ್ಷಿಣ ಪ್ರಾದೇಶಿಕ ಕಚೇರಿ ಬೃಹದಾಕಾರವಾಗಿ ನಾಗರಬಾವಿಯಲ್ಲಿ ತಲೆಯೆತ್ತಿ ನಿಂತಿದೆ.

**◆ ಅಕಾಡೆಮಿಯ ಕಾರ್ಯದರ್ಶಿಯಾಗಿ ನೀವು ಆರಂಭಿಸಿದ ಮೊದಲುಗಳು ಹಲವು...**

ಅವುಗಳಲ್ಲಿ ಮುಖ್ಯವಾಗಿ ಯುವ ಪುರಸ್ಕಾರ ಮತ್ತು ಮಕ್ಕಳ ಸಾಹಿತ್ಯ ಪುರಸ್ಕಾರಗಳನ್ನು ಹೇಳಬಹುದು.

**◆ ಸಾಹಿತ್ಯದ ಏಕಾಂತ ಮತ್ತು ಅಧಿಕಾರಿಯ – ಲೋಕಾಂತ ಇವುಗಳ ನಡುವಿನ ಕಂದರವನ್ನು ನೀವು ಅನುಭವಿಸಿರುವಿರಾ? ಸಾಹಿತ್ಯದ ಜೊತೆ ಒಡನಾಡುವುದಕ್ಕೂ ಸಾಹಿತಿಗಳ ಜೊತೆ ಒಡನಾಡುವುದಕ್ಕೂ ವ್ಯತ್ಯಾಸವಿದೆ ಅಲ್ಲವೆ?**

ನಾನು ಉದ್ದಕ್ಕೂ ಮಾಡಿದ್ದು ಒಂದು ರೀತೀಲಿ